**ಓ.ಎಸ್.ನಂಃ 262/2017**

**ಡಿಡಬ್ಲ್ಯೂ-4: ರತ್ನಮ್ಮ**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 08.07.2026 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: 2 ರಿಂದ 4ನೇ ಪ್ರತಿವಾದಿ ವಕೀಲರಿಂದಃ**

ಈ ದಾವೆಯನ್ನು ನನ್ನ ತಾಯಿ ನನ್ನ ಚಿಕ್ಕಮಾವ ಮತ್ತು ದೊಡ್ಡಮಾವನ ವಿರುದ್ದ ದಾವೆ ಹೂಡಿದ್ದಾರೆ. ನನ್ನ ತಾಯಿ ತನಗೆ ಆಸ್ತಿ ಬೇಕು ಎಂದು ಪರಿಹಾರ ಕೋರಿದ್ದಾರೆ. ದಾವಾ ಸ್ವತ್ತಿನ ಸರ್ವೇ ನಂಃ 37. ಸದರಿ ಸ್ವತ್ತು ನನ್ನ ಅಜ್ಜಿ ನಾಗಮ್ಮರವರ ಹೆಸರಿನಲ್ಲಿ ಇತ್ತು. ನನ್ನ ಅಜ್ಜಿಗೆ ದಾವಾ ಸ್ವತ್ತನ್ನು ಜೀವನಾಂಶಕ್ಕೆಂದು ಬಿಟ್ಟಿದ್ದರು. ದಾವಾ ಸ್ವತ್ತಿನ ಚೆಕ್ಕುಬಂದಿ ಗೊತ್ತಿಲ್ಲ. ದಾವಾ ಸ್ವತ್ತನ್ನು 1ನೇ ಪ್ರತಿವಾದಿಯ ಮಕ್ಕಳು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಮಾದಮ್ಮನ ಮಗಳು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಆಧಾರ್ ಕಾರ್ಡ್ ನ್ನು ಹಾಜರುಪಡಿಸಿದ್ದೇನೆ. ನಾನು ಮಾದಮ್ಮನ ಮಗಳು ಎಂದು ತೋರಿಸಲು ಯಾವುದೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ಕಾರಣ ನನಗೆ ಓದಲು ಬರುವುದಿಲ್ಲ. ನಾಗಮ್ಮ ಬದುಕಿದ್ದಾಗ 1ನೇ ಪ್ರತಿವಾದಿ ಹೆಸರಿಗೆ ವಿಲ್ ಮಾಡಿದ್ದಾರೆ ಎಂದರೆ ಸರಿ. ಸದರಿ ವಿಲ್ ರುಜುವಾತು ಆಗಿದೆ ಎಂದು ಜಿಲ್ಲಾ ನ್ಯಾಯಾಲಯ ಆದೇಶ ಮಾಡಿದೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ನಾವೇ ಬಂದಿರುತ್ತೇವೆ. ಸದರಿ ನಾಗಮ್ಮ ಸ್ವ-ಇಚ್ಛೆಯಿಂದ 1 ನೇ ಪ್ರತಿವಾದಿ ಹೆಸರಿಗೆ ವಿಲ್ ಬರೆದಿದ್ದರು ವಾದಿಯ ಕೋರಿಕೆ ಮೇರೆಗೆ ನ್ಯಾಯಾಲಯಕ್ಕೆ ಹಾಜರಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯ ಪಕ್ಷಗಾರರಾಗಲಿ ಮತ್ತು ದಾವೆಯ ವಿಷಯವಾಗಲಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ